# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1099

ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ್

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 18.12.2024.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಲವು ತಿಂಗಳಿಂದ **KSRTC, BMTC, NWKRTC, KKRTC** ವಿಭಾಗದ ನೌಕರರ ಭವಿಷ್ಯ ನಿಧಿ ಮೊತ್ತ ಇಲಾಖೆಯಿಂದ ಪಾವತಿಸದೆ ಬಾಕಿ ಉಳಿಸಿಕೊಂಡಿರುವುದಾಗಿ ಭವಿಷ್ಯ ನಿಧಿ ಆಯುಕ್ತರು ಗಂಭೀರವಾಗಿ ಆಕ್ಷೇಪ ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ; | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಇದ್ದಲ್ಲಿ ಪಾವತಿಸದೇ ಇರಲು ಕಾರಣವೇನು ಯಾವಾಗ ಭವಿಷ್ಯ ನಿಧಿ ಪಾವತಿಸಲಾಗುವುದು; ಪಾವತಿಸಬೇಕಾದ ಪ್ರತಿ ವಿಭಾಗದ ಮೊತ್ತವೆಷ್ಟು (ವಿವರಿಸುವುದು) | ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ 2023-24ನೇ ಸಾಲಿನ ಪೂರ್ವದ ಆರ್ಥಿಕ ವರ್ಷಗಳಲ್ಲಿ ಅಗಾಧವಾದ ಸಾಲದ ಹೊರೆಯಿತ್ತು ಹಾಗೂ ಸಾರಿಗೆ ನಿಗಮಗಳು ಇಂಧನ ಕಂಪನಿಗಳಿಗೆ ಇಂಧನದ ವೆಚ್ಚವನ್ನು, ಭವಿಷ್ಯ ನಿಧಿ ನ್ಯಾಸ ಮಂಡಳಿಗೆ ಬಾಕಿ ಮೊತ್ತ, ನಿವೃತ್ತ ನೌಕರರಿಗೆ ಉಪಧನ, ಬ್ಯಾಂಕ್ ಸಾಲ ಮತ್ತು ಸರಬರಾಜುದಾರರ/ ಇತರೆ ಬಿಲ್ಲುಗಳನ್ನು ಪಾವತಿಸದೇ ಬಾಕಿಯಿರಿಸಿದ್ದರಿಂದ ನಿಗಮಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿತ್ತು. ಹಾಗಾಗಿ, ಹೊಸ ಬಸ್ಸುಗಳನ್ನು ಖರೀದಿಸಲು ಮತ್ತು ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಸಹ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢಿಕರಿಸಿ ಕೊಳ್ಳಬೇಕಾಗಿತ್ತು. |

| **ವಿವರ** | ಮಾರ್ಚ್-2023ರ ಅಂತ್ಯಕ್ಕೆ | ಏಪ್ರಿಲ್-2023ರಿಂದ ನವೆಂಬರ್-2024ರವರೆಗೆ | ನವೆಂಬರ್-2024ರ ಅಂತ್ಯಕ್ಕೆ |
|---|---|---|---|
| ಭವಿಷ್ಯ ನಿಧಿ | 1230.36 | 1764.10 | 2994.46 |
| ನಿವೃತ್ತ ನೌಕರರ ಬಾಕಿ | 549.15 | 76.25 | 625.40 |
| ಹಾಲಿ ಸಿಬ್ಬಂದಿಗಳ ಬಾಕಿ | 385.96 | -71.15 | 314.81 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|

| | | | |
|---|---|---|---|
| ಇಂಧನ ಸರಬರಾಜುದಾರರಿಗೆ ಬಾಕಿ | 111.02 | 740.05 | 851.07 |
| ಸರಬರಾಜುದಾರರ ಮತ್ತು ಇತರೆ ಬಾಕಿ | 769.83 | 113.30 | 883.13 |
| ಸಾಲದ ಹೊಣೆಗಾರಿಕೆ | 1053.06 | -253.59 | 799.47 |
| ಒಟ್ಟು | 4099.38 | 2368.96 | 6468.34 |

2023-24ನೇ ಸಾಲಿನ ಪೂರ್ವದ ಆರ್ಥಿಕ ವರ್ಷಗಳಲ್ಲಿ 2020ರ ವೇತನ ಪರಿಷ್ಕರಣೆಯನ್ನು ಮಾರ್ಚ್-2023 ಕ್ಕೆ ಅನುಷ್ಠಾನಗೊಳಿಸಿದ್ದು, ಸದರಿ ಪರಿಷ್ಕರಣೆಯ ಹಿಂಬಾಕಿಯನ್ನು ಬಾಕಿ ಉಳಿಸಿಕೊಂಡಿರುತ್ತದೆ.

ನಾಲ್ಕು ನಿಗಮಗಳು ಭ.ನಿ ಬಾಕಿ ಮೊತ್ತದ ವಿವರ:

**(ರೂ.ಕೋಟಿಗಳಲ್ಲಿ)**

| **ನಿಗಮ/ ಸಂಸ್ಥೆ** | ಮಾರ್ಚ್-2023ರ ಅಂತ್ಯಕ್ಕೆ | ನವೆಂಬರ್-2024ರ ಅಂತ್ಯಕ್ಕೆ |
|---|---|---|
| ಕ.ರಾ.ರ.ಸಾ.ನಿಗಮ | 556.07 | 921.05 |
| ಬೆಂ.ಮ.ಸಾ.ಸಂಸ್ಥೆ | 81.12 | 789.51 |
| ವಾ.ಕ.ರ.ಸಾ.ಸಂಸ್ಥೆ | 575.06 | 1110.98 |
| ಕ.ಕ.ರ.ಸಾ.ನಿಗಮ | 18.11 | 172.92 |
| **ಒಟ್ಟು** | **1230.36** | **2994.46** |

ರಾಜ್ಯ ರಸ್ತೆ ಸಾರಿಗೆ ನಿಗಮಗಳು ರಸ್ತೆ ಸಾರಿಗೆ ನಿಗಮಗಳ ಕಾಯ್ದೆ-1950 **(The Road Transport Corporation Act,1950)** ರಡಿ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆಗಳಾಗಿರುತ್ತವೆ. ರಸ್ತೆ ಸಾರಿಗೆ ನಿಗಮಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ವೇತನ ಹಾಗೂ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನಿಗಮಗಳು ತನ್ನ ಆಂತರಿಕ ಮೂಲಗಳಿಂದಲೇ ಭರಿಸಬೇಕಾಗಿರುತ್ತದೆ.

ನಿಗಮಗಳು ಪ್ರಸ್ತುತ ಎದುರಿಸುತ್ತಿರುವ ಆರ್ಥಿಕ ಸಂಕಷ್ಟದಿಂದ ಹೊರಬರಲು ಹಾಗೂ ಶಾಸನಬದ್ಧ ಪಾವತಿಯಾದ ಭವಿಷ್ಯ ನಿಧಿ ಹಾಗೂ ಇಂಧನದ ಬಾಕಿ ಮೊತ್ತವನ್ನು ಮರುಪಾವತಿಸಲು ಪಡೆಯುವ ಸಾಲಕ್ಕೆ ತಗಲುವ ಅಸಲು ಮತ್ತು ಬಡ್ಡಿ ಮೊತ್ತವನ್ನು ಸರ್ಕಾರವು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಭರಿಸಲು ಕೋರಿ, ಸಂಸ್ಥೆಗಳಿಗೆ ಸರ್ಕಾರದ ಸರ್ವೀಸ್ ಲೋನ್ (Government Service Loan) ಅನ್ನು ಪಡೆಯಲು ಅನುಮತಿ ನೀಡುವಂತೆ ಕೋರಿರುವ ಪ್ರಸ್ತಾವನೆ ಪ್ರಸ್ತುತ ಪರಿಶೀಲನೆಯಲ್ಲಿದೆ.<br><br>ಮುಂದುವರೆದು, ದಿನಾಂಕ:01.01.2020 ರಿಂದ 28.02.2023ರ ಅವಧಿಯಲ್ಲಿ ಸೇವಾವಿಮುಕ್ತಿ ಹೊಂದಿದ ಅಧಿಕಾರಿ ಮತ್ತು ನೌಕರರಿಗೆ ಪಾವತಿಸಬೇಕಾದ **ಪರಿಷ್ಕೃತ ವೇತನ ಶ್ರೇಣಿಯಲ್ಲಿ ಉಪಧನ ಹಾಗೂ ಗಳಿಕೆ ರಜೆ ನಗದೀಕರಣ ಪಾವತಿಗಾಗಿ ರೂ.224.05 ಕೋಟಿಗಳ ವಿಶೇಷ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.**<br><br>ಮುಂದುವರೆದು, ಮುಂದಿನ ದಿನಗಳಲ್ಲಿ ನಿಗಮಗಳ ಆರ್ಥಿಕ ಸಾಮರ್ಥ್ಯಕ್ಕನುಗುಣವಾಗಿ ಸಾರಿಗೆ ನಿಗಮಗಳ ಭವಿಷ್ಯ ನಿಧಿ ಪಾವತಿಸಲು ಆದ್ಯತೆಯ ಮೇರೆಗೆ ಪರಿಶೀಲಿಸಲಾಗುವುದು. |

ಸಂಖ್ಯೆ: ಟಿಡಿ 251 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು